**All India Radio: Bangalore**
**National Bulletin In Kannada**
**08.09.2025 07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ನವದೆಹಲಿಯಲ್ಲಿ ಸಂಸದರ ಕಾರ್ಯಾಗಾರ : ಸಮಾರೋಪ ಅಧಿವೇಶನವನ್ನು ಉದ್ದೇಶಿಸಿ ಇಂದು ಪ್ರಧಾನಿ ಭಾಷಣ
2. ಬಿಹಾರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ಅರ್ಜಿಗಳ ವಿಚಾರಣೆಯನ್ನು ಇಂದು ಕೈಗೆತ್ತಿಕೊಳ್ಳಲಿರುವ ಸುಪ್ರೀಂಕೋರ್ಟ್
3. ಇರಾನ್ ಸಹವರ್ತಿಯೊಂದಿಗೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ದೂರವಾಣಿ ಸಂಭಾಷಣೆ ; ಚಾಬಹಾರ್ ಬಂದರು ಅಭಿವೃದ್ಧಿಗೆ ಒತ್ತು
4. ಭಾರತಕ್ಕೆ ೪ನೇ ಬಾರಿ ಏಷ್ಯಾಕಪ್ ಹಾಕಿ ಕಿರೀಟ ; ವಿಶ್ವಕಪ್‌ಗೆ ಅರ್ಹತೆ, ಪ್ರಧಾನಿ ಅಭಿನಂದನೆ
5. ಯುಎಸ್ ಓಪನ್ ಟೆನಿಸ್ ; ಪುರುಷರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್

<><><><>

ನವದೆಹಲಿಯಲ್ಲಿ ನಡೆಯುತ್ತಿರುವ ಬಿಜೆಪಿ ಸಂಸದರ ತರಬೇತಿ ಶಿಬಿರದ ಸಮಾರೋಪ ಅಧಿವೇಶನದಲ್ಲಿ ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಷಣ ಮಾಡಲಿದ್ದಾರೆ. ಸಂಸತ್ ಸಂಕೀರ್ಣದ ಬಾಲಯೋಗಿ ಸಭಾಂಗಣದಲ್ಲಿ ಈ ಎರಡು ದಿನಗಳ ಕಾರ್ಯಾಗಾರ ನಿನ್ನೆ ಆರಂಭವಾಗಿದ್ದು, ಇಂದು ಅಂತ್ಯಗೊಳ್ಳಲಿದೆ.

ಈ ಕುರಿತು ಒಂದು ವರದಿ : ಅಭಯ್ (೪೦ ಸೆಕೆಂಡ್‌ಗಳು)

ಈ ಶಿಬಿರವನ್ನು ಉಪರಾಷ್ಟ್ರಪತಿಗಳ ಚುನಾವಣೆಯ ಮತದಾನ ಪ್ರಕ್ರಿಯೆ ಸೇರಿದಂತೆ ಸಂಸದರಿಗೆ ತಾಂತ್ರಿಕ ಮತ್ತು ಮೌಲಿಕ ತರಬೇತಿ ನೀಡುವ ಉದ್ದೇಶದಿಂದ ಆಯೋಜಿಸಲಾಗಿದೆ. ಉಪರಾಷ್ಟ್ರಪತಿಗಳ ಚುನಾವಣೆ ನಾಳೆ ನಡೆಯಲಿದೆ. ಈ ಶಿಬಿರದಲ್ಲಿ ರಾಷ್ಟ್ರದಾದ್ಯಂತದ ಬಿಜೆಪಿ

ಸಂಸದರು ಹಾಗೂ ಹಿರಿಯ ನಾಯಕರು ಭಾಗವಹಿಸಿದ್ದಾರೆ. ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯುತ್ತಿದ್ದು, ಪರಸ್ಪರ ಅನುಭವ ಹಂಚಿಕೊಳ್ಳಲಾಗುತ್ತಿದೆ. ಕಾರ್ಯಾಗಾರದಲ್ಲಿ ಬಿಜೆಪಿ ಸಂಸದೀಯ ಪಕ್ಷ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳ ಕುರಿತ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿತು. ಕೇಂದ್ರ ವಾಣಿಜ್ಯ ಸಚಿವ ಮಂಡಿಸಿದ ನಿರ್ಣಯದ ಕುರಿತು ಬಿಜೆಪಿ ಸಂಸದರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಈ ದಿಟ್ಟ ಮತ್ತು ನಾಗರಿಕ ಸ್ನೇಹಿ ಚಿಂತನೆಯ ಕ್ರಮಕ್ಕಾಗಿ ಅಭಿನಂದಿಸಿದರು. ನವದೆಹಲಿನಲ್ಲಿ ನಡೆಯುತ್ತಿರುವ ಸಂಸದರ ಕಾರ್ಯಾಗಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ನಿನ್ನೆ ಭಾಗವಹಿಸಿದರು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ, ತಮ್ಮ ಪಕ್ಷದಲ್ಲಿ ಸಂಸದರ ಕಾರ್ಯಾಗಾರದಂತಹ ವೇದಿಕೆಗಳು ಬಹಳ ಮಹತ್ವದ್ದಾಗಿವೆ. ಇವು ಪರಸ್ಪರ ಕಲಿಕೆಗೆ ಮತ್ತು ಜನಸೇವೆಯನ್ನು ಮತ್ತಷ್ಟು ಉತ್ತಮವಾಗಿ ಮಾಡಲು, ವಿವಿಧ ವಿಚಾರಗಳನ್ನು ಚರ್ಚಿಸಲು ಉತ್ತಮ ವೇದಿಕೆಯಾಗಿವೆ ಎಂದು ಹೇಳಿದ್ದಾರೆ. ಮೊದಲನೇ ದಿನದ ಕಾರ್ಯಾಗಾರದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಸಂಸದರ ಈ ಶಿಬಿರ ತುಂಬಾ ಉತ್ತಮ ರೀತಿಯಲ್ಲಿ ನಡೆಯುತ್ತಿದೆ. ಶಿಬಿರದ ಎಲ್ಲ ತರಬೇತಿ ಅಧಿವೇಶನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದಾರೆ. ಇಂದು ಎನ್‌ಡಿಎ ಮೈತ್ರಿಕೂಟದ ಇತರ ಪಕ್ಷಗಳ ಸಂಸದರೂ ಸಹ ಶಿಬಿರದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಧ್ವನಿ : ಕಿರಣ್ ರಿಜಿಜು (೨೩ ಸೆಕೆಂಡ್‌ಗಳು)

<><><><>

ಜೂನ್ ೨೪ರಂದು ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸುವ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾದ ಹಲವು ಅರ್ಜಿಗಳ ವಿಚಾರಣೆಯನ್ನು ಇಂದು ಸುಪ್ರೀಂಕೋರ್ಟ್ ಕೈಗೆತ್ತಿಕೊಳ್ಳಲಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೊಯ್‌ಮಲ್ಯ ಬಾಕ್ಚಿ ರಾಷ್ಟ್ರೀಯ ಜನತಾದಳ, ಆರ್‌ಜೆಡಿ, ಎಐಎಂಐಎಂ ಪಕ್ಷಗಳ ಸೇರಿದಂತೆ ವಿವಿಧ ಅರ್ಜಿಗಳನ್ನು ಪರಿಗಣಿಸಲಿದೆ. ಕರಡು ಮತದಾರರ ಪಟ್ಟಿಯಲ್ಲಿನ ೭೨.೪ ದಶಲಕ್ಷ ಮತದಾರರಲ್ಲಿ ಶೇಕಡ ೯೯.೫ ರಷ್ಟು ಜನರು ಪರಿಷ್ಕರಣೆ ಪ್ರಕ್ರಿಯೆ ಸಮಯದಲ್ಲಿ ತಮ್ಮ ಅರ್ಹತಾ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ಆಯೋಗ ವರದಿ ಸಲ್ಲಿಸಿದೆ. ಈ ವಿಷಯದ ಕುರಿತು

ವಿಚಾರಣೆಯನ್ನು ನ್ಯಾಯಾಲಯ ಪುನರಾರಂಭಿಸಲಿದೆ. ಇದರಲ್ಲಿ ಎನ್‌ಜಿಒಗಳು, ಕಾರ್ಯಕರ್ತರು ಮತ್ತು ರಾಜಕೀಯ ಪಕ್ಷಗಳ ಅರ್ಜಿಗಳೂ ಸೇರಿವೆ.

<><><><>

ಪ್ರಧಾನಿ ನರೇಂದ್ರ ಮೋದಿ ನಾಳೆ ಪ್ರವಾಹ ಪೀಡಿತ ಪಂಜಾಬ್‌ಗೆ ಭೇಟಿ ನೀಡಿ ರಾಜ್ಯದ ಪರಿಸ್ಥಿತಿಯನ್ನು ಅವಲೋಕಿಸಲಿದ್ದಾರೆ. ನಂತರ, ವಿಪತ್ತು ಪೀಡಿತ ಹಿಮಾಚಲ ಪ್ರದೇಶಕ್ಕೆ ತೆರಳಿ ಪರಿಶೀಲಿಸಲಿದ್ದಾರೆ. ಭೇಟಿಗೆ ಬಗ್ಗೆ ಪ್ರತಿಕ್ರಿಯಿಸಿದ ಪಂಜಾಬ್ ರಾಜ್ಯ ಬಿಜೆಪಿ ಮುಖ್ಯಸ್ಥ ಸುನಿಲ್ ಜಾಖರ್, ಪ್ರಧಾನಿ ನರೇಂದ್ರ ಮೋದಿ ಪಂಜಾಬ್‌ನಲ್ಲಿನ ಪ್ರವಾಹ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ ಮತ್ತು ಅದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಎಂದು ಹೇಳಿದರು. ಸ್ಥಳೀಯ ಪರಿಸ್ಥಿತಿಗಳನ್ನು ವೈಯಕ್ತಿಕವಾಗಿ ನಿರ್ಣಯಿಸಲು ಹಾಗೂ ಪಂಜಾಬ್ ಜನರಿಗೆ ಸಾಕಷ್ಟು ನೆರವನ್ನು ಒದಗಿಸಲು ಪ್ರವಾಹ ಪರಿಸ್ಥಿತಿಯ ವಾಸ್ತವತೆಯನ್ನು ಅರ್ಥಮಾಡಿಕೊಳ್ಳಲು ಪ್ರಧಾನಿ ನಾಳೆ ಪಂಜಾಬ್‌ಗೆ ಭೇಟಿ ನೀಡಲಿದ್ದಾರೆ. ಇದಕ್ಕೂ ಮೊದಲು, ಕೇಂದ್ರ ಕೃಷಿ ಸಚಿವ ಶಿವರಾಜ್ ಚೌಹಾಣ್ ನೆರೆ ಪರಿಸ್ಥಿತಿಯನ್ನು ಮೌಲ್ಯಮಾಪನ ಮಾಡಲಿದ್ದಾರೆ. ಪಂಜಾಬ್‌ನಲ್ಲಿ ಪ್ರವಾಹದಿಂದ ಉಂಟಾದ ಹಾನಿಯನ್ನು ನಿರ್ಣಯಿಸಲು ಭೇಟಿ ನೀಡಿದ ಕೇಂದ್ರ ಸರ್ಕಾರದ ಎರಡು ತಂಡಗಳು, ತಮ್ಮ ಪ್ರವಾಸದ ನಂತರ ಕೇಂದ್ರ ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸಲಿವೆ. ದೆಹಲಿಯಲ್ಲಿ ನಾಳೆ ನಡೆಯುವ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಮಧ್ಯಾಹ್ನ ಅಮೃತಸರಕ್ಕೆ ತೆರಳುವ ಸಾಧ್ಯತೆಯಿದೆ ಅಲ್ಲಿ ಅವರು ರಾಜ್ಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸುವ ನಿರೀಕ್ಷೆಯಿದೆ.

<><><><>

ಬದಲಾಗುತ್ತಿರುವ ಜಾಗತಿಕ ವ್ಯಾಪಾರ ಮತ್ತು ರಾಜತಾಂತ್ರಿಕ ಹೊಂದಾಣಿಕೆಗಳ ಮಧ್ಯೆ, ಭಾರತವು ಇರಾನ್‌ನ ಕಾರ್ಯತಂತ್ರದ ಚಾಬಹಾರ್ ಬಂದರಿನ ಮೇಲೆ ಹೊಸ ಒತ್ತು ನೀಡುವ ಮೂಲಕ ತನ್ನ ಕನೆಕ್ಟ್ ಸೆಂಟ್ರಲ್ ಏಷ್ಯಾ ನೀತಿಯನ್ನು ತೀವ್ರಗೊಳಿಸುತ್ತಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ನಿನ್ನೆ ತಮ್ಮ ಇರಾನಿನ ಸಹವರ್ತಿ ಅಲಿ ಅಕ್ಬರ್ ಅಹ್ಮದಿಯನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದು, ಚಾಬಹಾರ್ ಯೋಜನೆ ಸೇರಿದಂತೆ ಪ್ರಾದೇಶಿಕ ಬೆಳವಣಿಗೆಗಳು ಮತ್ತು ಸಹಕಾರದ ಕುರಿತು ಚರ್ಚಿಸಿದರು. ಓಮನ್ ಕೊಲ್ಲಿಯ ಚಾಬಹಾರ್‌ನಲ್ಲಿರುವ ಶಾಹಿದ್ ಬೆಹೆಶ್ತಿ ಟರ್ಮಿನಲ್, ಭಾರತಕ್ಕೆ ಅಫ್ಘಾನಿಸ್ತಾನ ಮತ್ತು ಮಧ್ಯ

ಏಷ್ಯಾಕ್ಕೆ ನೇರ ಪ್ರವೇಶವನ್ನು ಒದಗಿಸುವ ನಿರ್ಣಾಯಕ ವ್ಯಾಪಾರ ಕೇಂದ್ರವೆಂದು ಪರಿಗಣಿಸಲಾಗಿದೆ. ಬಂದರಿನಲ್ಲಿ ಸರಕು ಮತ್ತು ಕಂಟೇನರ್ ಟರ್ಮಿನಲ್‌ಗಳನ್ನು ಸಜ್ಜುಗೊಳಿಸಲು ಹಾಗೂ ನಿರ್ವಹಿಸಲು ಭಾರತ ಮೇ ೨೦೨೪ ರಲ್ಲಿ ಇರಾನ್‌ನೊಂದಿಗೆ ೧೦ ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿದೆ. ೨೦೧೬-೧೭ನೇ ಹಣಕಾಸು ವರ್ಷದಿಂದ ಚಾಬಹಾರ್‌ಗೆ ೪೦೦ ಕೋಟಿ ರೂಪಾಯಿಗಳನ್ನು ಮಿಸಲಿಡಲಾಗಿದೆ, ಇಲ್ಲಿಯವರೆಗೆ ೨೦೧.೫೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಬಂದರು ೨೦೨೩-೨೪ರಲ್ಲಿ ಹಡಗು ನಿರ್ವಹಣೆಯಲ್ಲಿ ಶೇಕಡಾ ೪೩ ರಷ್ಟು ಹೆಚ್ಚಳ ಮತ್ತು ಕಂಟೇನರ್ ನಿರ್ವಹಣೆಯಲ್ಲಿ ಶೇಕಡಾ ೩೪ ರಷ್ಟು ಹೆಚ್ಚಳವನ್ನು ದಾಖಲಿಸಿದೆ.

<><><><>

ಪ್ರಪಂಚಾದ್ಯಂತ ಜನರು ನಿನ್ನೆ ರಾತ್ರಿ ಗಗನದಲ್ಲಿ ಸಂಭವಿಸಿದ ಅದ್ಭುತ ಘಟನೆ ಖಗ್ರಾಸ ಚಂದ್ರಗ್ರಹಣಕ್ಕೆ ಸಾಕ್ಷಿಯಾದರು. ಇದು ಈ ವರ್ಷದ ೨ನೇ ಚಂದ್ರಗ್ರಹಣವಾಗಿದ್ದ ೯.೫೭ಕ್ಕೆ ಆರಂಭವಾಗಿ ೧೧.೦೧ಕ್ಕೆ ಸಂಪೂರ್ಣ ಚಂದ್ರಗ್ರಹಣ ಸಂಭವಿಸಿದ್ದು, ಈ ವೇಳೆ ಚಂದ್ರ ಸಂಪೂರ್ಣ ತಾಮ್ರ ವರ್ಣಯುಕ್ತ ಕೆಂಪು ಬಣ್ಣಕ್ಕೆ ತಿರುಗಿತು. ಇದು ಅಪರೂಪದ ರಕ್ತಚಂದಿರನ ದೃಶ್ಯವಾಗಿತ್ತು. ಚಂದ್ರಗ್ರಹಣ ೧೨.೨೨ ಕ್ಕೆ ಕೊನೆಗೊಂಡಿತು. ಈ ಪ್ರಕ್ರಿಯೆಯನ್ನು ಭಾರತಾದ್ಯಂತ ೪೮ ನಿಮಿಷಗಳ ಬರಿಗಣ್ಣಿನಿಂದ ವೀಕ್ಷಿಸಲು ಸಾಧ್ಯವಾಯಿತು. ಭೂಮಿಯು ಸೂರ್ಯ ಮತ್ತು ಚಂದ್ರನ ನಡುವೆ ಬಂದು ಸೂರ್ಯನ ಬೆಳಕು ಚಂದ್ರನ ಮೇಲ್ಮೈಯನ್ನು ತಲುಪುವುದನ್ನು ತಡೆದಾಗ ಚಂದ್ರಗ್ರಹಣ ಸಂಭವಿಸುತ್ತದೆ.

<><><><>

ಬಿಹಾರದ ರಾಜ್‌ಗೀರ್‌ನ ಹಾಕಿ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಪುರುಷರ ಏಷ್ಯಾಕಪ್ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ದಕ್ಷಿಣ ಕೋರಿಯಾ ವಿರುದ್ಧ ಭಾರತ ೪-೧ರ ಅಮೋಘ ಜಯಸಾಧಿಸಿದೆ. ಕ್ಯಾಪ್ಟನ್ ಹರ್ಮನ್‌ಪ್ರೀತ್ ಸಿಂಗ್ ಮತ್ತು ರಾಜೀಂದರ್ ಜೋಡಿ ಉತ್ತಮವಾಗಿ ಆಟವಾಡಿ ತಂಡದ ಗೆಲುವಿಗೆ ಶ್ರಮಿಸಿದರು. ದಿಲ್‌ಪ್ರೀತ್‌ರವರು ಸಹ ಉತ್ತಮ ಪ್ರದರ್ಶನ ನೀಡಿದರು. ಕೊನೆಗೂ ಎಂಟು ವರ್ಷಗಳ ಕಾಯುವಿಕೆಗೆ ತೆರೆಬಿದ್ದಿದ್ದು, ಭಾರತ ೨೦೨೬ರಲ್ಲಿ ನಡೆಯಲಿರುವ ಎಫ್‌ಐಹೆಚ್ ಪುರುಷರ ಹಾಕಿ ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿದೆ. ಹಾಕಿ ಇಂಡಿಯಾ ಪ್ರತಿ ಆಟಗಾರರಿಗೆ ಮೂರು ಲಕ್ಷ ರೂಪಾಯಿಗಳ ಇನಾಮು ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿಯವರು ಭಾರತದ ಹಾಕಿ ತಂಡವನ್ನು ಅಭಿನಂದಿಸಿದ್ದು, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು ಇದು ಭಾರತದ ಹಾಕಿ

ಮತ್ತು ಕ್ರೀಡಾ ಕ್ಷೇತ್ರಕ್ಕೆ ಹೆಮ್ಮೆಯ ಕ್ಷಣ ಎಂದಿದ್ದಾರೆ. ಹಾಗೂ ಕ್ರೀಡಾಪಟುಗಳು ಮುಂದೆಯೂ ಇಂತಹ ಸಾಧನೆಗಳನ್ನು ಮಾಡಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ.

<><><><>

ನ್ಯೂಯಾರ್ಕ್‌ನಲ್ಲಿ ನಡೆದ ಯುಎಸ್ ಓಪನ್ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ ವಿಭಾಗದ ಪ್ರಶಸ್ತಿಯನ್ನು ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ತಮ್ಮದಾಗಿಸಿಕೊಂಡಿದ್ದಾರೆ. ಆ ಮೂಲಕ ಪುರುಷರ ಟೆನಿಸ್ ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ನಿನ್ನೆ ನಡೆದ ಅಂತಿಮ ಪಂದ್ಯದಲ್ಲಿ ಅಲ್ಕರಾಜ್ ಇಟಲಿಯ ಯಾನಿಕ್ ಸಿನ್ನಿರ್ ವಿರುದ್ಧ ೬-೨, ೩-೬, ೬-೧, ೬-೪ ಸೆಟ್‌ಗಳ ಅಂತರದಲ್ಲಿ ಗೆಲುವು ಸಾಧಿಸಿದರು.

<><><><>

ಉತ್ತರಪ್ರದೇಶದಲ್ಲಿ ಕನಿಷ್ಠ ೪೮ ಜಿಲ್ಲೆಗಳು ತೀವ್ರ ಪ್ರವಾಹದಲ್ಲಿ ಸಿಲುಕಿವೆ. ಈ ಪ್ರದೇಶಗಳಲ್ಲಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ಬರದಿಂದ ಸಾಗುತ್ತಿವೆ. ಗಂಗಾ, ಯಮುನಾ, ಶಾರದಾ, ರಾಮ್‌ಗಂಗಾ ಮುಂತಾದ ಪ್ರಮುಖ ನದಿಗಳು ಉಕ್ಕಿ ಹರಿಯುತ್ತಿದ್ದು, ೪೧ ಸಾವಿರ ಹೆಕ್ಟೇರ್‌ಗೂ ಹೆಚ್ಚು ಭೂಮಿ ಮುಳುಗಡೆಯಾಗಿದೆ. ಆಗ್ರ, ಮಥುರಾ, ಅಲಿಗಡ್, ಫರುಖಾಬಾದ್, ಶಹಜಹಾನ್ ಪುರ್ ಮತ್ತು ಪ್ರಯಾಗ್‌ರಾಜ್ ಜಿಲ್ಲೆಗಳು ಪ್ರವಾಹದಿಂದ ಹೆಚ್ಚು ಭಾದಿತವಾಗಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾವಯಾಯಿತು <><>